TAW-4194/2022-23

Office of the Additional Commissioner of Commercial Taxes
24 FEB 2023
2306
ADCOM (e-Governance)

# ಕರ್ನಾಟಕ ಸರ್ಕಾರ

## (ವಾಣಿಜ್ಯ ತೆರಿಗೆಗಳ ಇಲಾಖೆ)

ಸಂಖ್ಯೆ:ವಾತೆಜಂಆ(ಆ)/ವಿಸ&ಸೇತೆಕ-01/ಬಿಎಂ/ಸಿಆರ್-18/2022-23

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ)
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-01
3ನೇ ಮಹಡಿ ಟಿ.ಟಿ.ಎಂ.ಸಿ, ಬಿ.ಎಂ.ಟಿ.ಸಿ ಕಟ್ಟಡ,
ಯಶವಂತಪುರ, ಬೆಂಗಳೂರು-560022.
Email: jcctdgsto1.bng@ka.gov.in
ದೂರವಾಣಿ ಸಂಖ್ಯೆ: 080-23570382.
ದಿನಾಂಕ: 22/02/2023.

## ಟೆಂಡರ್ ಅಧಿಸೂಚನೆ

**ವಿಷಯ:-** ದಿನಾಂಕ: 01/04/2023ರಿಂದ 31/03/2024ರ ಅವಧಿಯವರೆಗೆ ಈ ವಿಭಾಗದ ಅಧೀನ ಕಛೇರಿಗಳ ಕರ್ತವ್ಯ ನಿರ್ವಹಣೆಗಾಗಿ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮೂಲಕ ಒಟ್ಟು 14 (ಹದಿನಾಲ್ಕು ಮಾತ್ರ) ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆದುಕೊಳ್ಳುವ ಬಗ್ಗೆ.

AC.ecgw3

**ಉಲ್ಲೇಖ:-**
1. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕ), ಬೆಂಗಳೂರು ಇವರ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್-15/2022-23, ದಿನಾಂಕ: 22/12/2022.
2. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕ), ಬೆಂಗಳೂರು ಇವರ ಪತ್ರ ಸಂಖ್ಯೆ: ವಿಹೆಚ್‌ಟಿ/ಸಿಆರ್-22/2019-20, ದಿನಾಂಕ: 27/04/2022.

* * * *

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆಗಳ ಕಛೇರಿ-01, ಬೆಂಗಳೂರು ಇವರ ಕಛೇರಿಯ ಉಪಯೋಗಕ್ಕಾಗಿ ಒಟ್ಟು 14 (ಹದಿನಾಲ್ಕು ಮಾತ್ರ) ಮಾಲೀಕರೇ ಚಾಲಕರಾಗಿರುವ ಖಾಸಗಿ ವಾಹನಗಳನ್ನು ರೂ.35,000/-(ಮೂವತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳ ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖ(1)ರ ಪತ್ರದಲ್ಲಿ ಮಾನ್ಯ ವಾಣಿಜ್ಯ ತೆರಿಗೆ ಆಯುಕ್ತರವರು ಅನುಮತಿಯನ್ನು ನೀಡಿರುತ್ತಾರೆ.

ಅಧಿಕೃತ ಟ್ರಾವೆಲ್ ಏಜೆನ್ಸಿ/ಸಂಸ್ಥೆ/ಮಾಲೀಕರೇ ವಾಹನ ಚಾಲಕರಾಗಿರುವವರಿಂದ ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಮೊಹರಾದ ಲಕೋಟೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳವರು ಅರ್ಜಿಯನ್ನು ಈ ಕಛೇರಿಯಲ್ಲಿ ಮೊಹರಾದ ಲಕೋಟೆಯಲ್ಲಿ ಸಲ್ಲಿಸಬಹುದಾಗಿರುತ್ತದೆ.

(ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 96 ಶಿವಾನಿ 2012, ದಿನಾಂಕ: 23-08-2012ರಲ್ಲಿ ತಿಳಿಸಿರುವ ನಿಯಮಗಳನ್ವಯ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು)

| | |
|---|---|
| 1) ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: | 15/03/2023. ಸಮಯ: 5 ಗಂಟೆಯವರೆಗೆ. |
| 2) ಲಕೋಟೆ ತೆರೆಯುವ ದಿನಾಂಕ: | 16/03/2023. ಬೆಳಿಗ್ಗೆ 11.00 ಗಂಟೆಗೆ. |
| 3) ಗುತ್ತಿಗೆಯ ಅವಧಿ: | **01/04/2023ರಿಂದ 31/03/2024.** |
| 4) ಪಡೆಯಲಾಗುವ ವಾಹನಗಳ ಸಂಖ್ಯೆ: | ಒಟ್ಟು 14 (ಹದಿನಾಲ್ಕು ಮಾತ್ರ) |
| 5) ವಾಹನದ ಮಾದರಿ : | 2018ರಲ್ಲಿ ತಯಾರಾದ ಅಥವಾ ನಂತರದ ವರ್ಷದಲ್ಲಿ ತಯಾರಾದ ವಾಹನಗಳು. |

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು.**

1. ಅರ್ಜಿದಾರರ ಹೆಸರು, ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು–2
2. ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ ರೇಷನ್‌ಕಾರ್ಡ್/ಆಧಾರ್ ಕಾರ್ಡ್/ ಪಾಸ್‌ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ).
3. ಬ್ಯಾಂಕ್ ಖಾತೆಯ ವಿವರಗಳು/ಚೆಕ್‌ನ ಪ್ರತಿ.
4. ಪಾನ್ ಕಾರ್ಡ್ ಮತ್ತು ಆಧಾರ ಕಾರ್ಡ್‌ನ ಪ್ರತಿ.
5. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ.
6. ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ.
7. ವಾಹನದ ನೋಂದಣಿ ಪುಸ್ತಕದ ಪ್ರತಿ.
8. ವಾಹನದ ವಿಮಾ ಪಾಲಿಸಿಯ ಪ್ರತಿ.
9. ರಸ್ತೆ ತೆರಿಗೆ(Road Tax) ಪಾವತಿಸಿರುವ ವಿವರ.
10. ವಾಯು ಮಾಲಿನ್ಯರಹಿತ ಪ್ರಮಾಣ ಪತ್ರ. (Polution certificate)

**ಸೂಚನೆಗಳು:**

1. ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಯನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ **"ಖಾಸಗಿ ವಾಹನ ಮಾಲೀಕರ/ಚಾಲಕರ ಹೊರಗುತ್ತಿಗೆ ಸೇವೆ – ಸಲ್ಲಿಸಲು ಅರ್ಜಿ"** ಎಂದು ನಮೂದಿಸುವುದು.
2. ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
3. ಅರ್ಜಿಗಳನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, ಬೆಂಗಳೂರು ರವರ ಕಛೇರಿಯಲ್ಲಿ ಖುದ್ದಾಗಿ ಸಲ್ಲಿಸಿ, ಸ್ವೀಕೃತಿ ಪಡೆಯುವುದು.
4. ಯಾವುದೇ ಕಾರಣವನ್ನು ನೀಡದೆ ಅರ್ಜಿಯನ್ನು ತಿರಸ್ಕರಿಸುವ ಹಕ್ಕನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–01, ಬೆಂಗಳೂರು ಇವರಿಗೆ ಕಾಯ್ದಿರಿಸಲಾಗಿದೆ.
5. ಆಯ್ಕೆಯಾದ ಅರ್ಜಿದಾರರ ಪಟ್ಟಿಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.

## ಟೆಂಡರ್ ಪ್ರಕಟಣೆಯ ಷರತ್ತು ಮತ್ತು ನಿಬಂಧನೆಗಳು

1. ಅನಾರೋಗ್ಯವು ಸೇರಿದಂತೆ ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ತಿಂಗಳಿನಲ್ಲಿ ಒಂದು ದಿನ ಮಾತ್ರ ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯವರಿಂದ ಅನುಮತಿ ಪಡೆದು, ಮಾಲೀಕ/ಚಾಲಕರು ರಜೆ ಪಡೆಯಬಹುದು. **ಆ ಅವಧಿಯಲ್ಲಿ ಬದಲಿ ವಾಹನದ ವ್ಯವಸ್ಥೆ ಕಡ್ಡಾಯವಾಗಿ ಮಾಡಲೇಬೇಕು.** ಇಲ್ಲದಿದ್ದಲ್ಲಿ ಗೈರು ಹಾಜರಿ ದಿವಸ ಎಂದು ಪರಿಗಣಿಸಿ ಬಾಡಿಗೆ ಕಡಿತಗೊಳಿಸಲಾಗುವುದು.
2. ಮಾಸಿಕ ಬಾಡಿಗೆ ಹೊರಗುತ್ತಿಗೆ ಆಧಾರದ ಮೇಲೆ ಹಾಗೂ ಕರಾರಿನಂತೆ ದರಗಳಿಗೆ ಒಳಪಟ್ಟು ಮಾತ್ರ ವಾಹನಗಳನ್ನು ಬಾಡಿಗೆಗೆ ಪಡೆಯಲಾಗುವುದು.
3. ಮಾಲೀಕ/ಚಾಲಕರು ಕಟ್ಟುನಿಟ್ಟಾಗಿ ಸಮಯಪಾಲನೆ ಮಾಡತಕ್ಕದ್ದು. ವಾಹನ ಉಪಯೋಗಿಸುವ ಕಛೇರಿಯ ಅಧಿಕಾರಿಯಿಂದ ಈ ಕುರಿತು ದೂರುಗಳು ಬಂದಲ್ಲಿ ಅಂತಹ ವಾಹನದ ಬಳಕೆಯನ್ನು ನಿಲ್ಲಿಸುವ, ಒಪ್ಪಂದವನ್ನು ರದ್ದುಪಡಿಸುವ ಅಧಿಕಾರ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರವರದ್ದಾಗಿರುತ್ತದೆ.
4. ಇಲಾಖೆಯ ಈ ವಿಭಾಗದ ಪ್ರತಿ ಕಛೇರಿಯಲ್ಲಿ ಉಪಯೋಗಿಸಿರುವ ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ನಿಗದಿತ ಲಾಗ್ ಪುಸ್ತಕವನ್ನು ನಿರ್ವಹಿಸಿ ಪ್ರತಿ ದಿನದ ಆರಂಭ ಮತ್ತು ಅಂತ್ಯದವರೆಗಿನ ವಾಹನ ಓಡಾಟದ ಸಂಬಂಧ ಈ ಪುಸ್ತಕದಲ್ಲಿ ಅಗತ್ಯ ದಾಖಲೆಗಳನ್ನು ನಮೂದಿಸಿ ವಾಹನವನ್ನು ಉಪಯೋಗಿಸಿದ ಅಧಿಕಾರಿಯವರಿಂದ ರುಜು ಪಡೆಯತಕ್ಕದ್ದು.